


ನಿಜವಾದ ಭಕ್ತನಾರು?
ತಮಿಳು ಮೂಲ : ಗುರುದಾಸ್
ಕನ್ನಡಕ್ಕೆ : ರಾಘವೇಶಾನಂದ
ಚಿತ್ರ : ಶಂಕರ್
ಪಾಂಡವರು ವನವಾಸದಲ್ಲಿದ್ದಾಗ ಪ್ರತಿದಿನ ಬೆಳಗ್ಗೆ ಬೇಗನೆ ಎದ್ದು ಭಗವಂತನ ಪ್ರಾರ್ಥನೆ ಮಾಡುತ್ತಿದ್ದರು. ಆದರೆ ಭೀಮ ಬಹಳ ಹೊತ್ತು ನಿದ್ದೆ ಮಾಡುತ್ತಿದ್ದ.
ಕೃಷ್ಣ! ಮುಕುಂದ! ಜನಾರ್ದನ!
2
ಭೀಮ, ನಿನ್ನ ದೇಹ ಬಲಿಷ್ಠ, ಆರೋಗ್ಯಶಾಲಿ ಆದರೆ ನೀನು ತುಂಬಾ ಸೋಮಾರಿ.
3
ಅವನು ನಮ್ಮೊಡನೆ ಪ್ರಾರ್ಥನೆಗೆ ಕೂಡ ಬರುವುದಿಲ್ಲ.
4
ಅರ್ಜುನನಿಗೆ ತನ್ನ ಬಗ್ಗೆ ಹೆಮ್ಮೆ ಹಾಗೂ ಅಹಂಕಾರ.
ಕೃಷ್ಣನಿಗೆ ಎಲ್ಲರಿಗಿಂತ ನನ್ನ ಮೇಲೆ ಹೆಚ್ಚು ಪ್ರೀತಿ. ಭೀಮನ ಮೇಲೆ ಅಷ್ಟಿಲ್ಲ.
5
ಒಂದು ದಿನ ಎಲ್ಲರೂ ಊಟಕ್ಕೆ ಕುಳಿತಿದ್ದಾಗ.....
ಅಣ್ಣಾ, ನಾಳೆ ನಾವೇಕೆ ಶ್ರೀಕೃಷ್ಣನನ್ನು ಊಟಕ್ಕೆ ಕರೆಯಬಾರದು? ದ್ರೌಪದಿ ಅನೇಕ ಪದಾರ್ಥಗಳನ್ನು ತಯಾರು ಮಾಡುತ್ತಾಳೆ.
ಒಳ್ಳೆಯ ಸಲಹೆ, ಅರ್ಜುನ
6
ಕೃಷ್ಣನನ್ನು ಆಹ್ವಾನಿಸಲು ನಕುಲ ಹೋದನು, ಆದರೆ ನಿರಾಶ
ಕೃಷ್ಣನಿಗೆ ನಾಳೆ ಬೇರೆ ಏನೋ ಕಾರ್ಯವಿದೆಯಂತೆ. ನಾಳಿದ್ದು ಬಿಡುವು ಆಗುವುದಾಗಿ ತಿಳಿಸಿದನು.
7


ಅರ್ಜುನ ನಸುನಗುತ್ತಾ ಎದ್ದು ನಿಂತನು.
ನೀನು ಕರೆದರೆ ಕೃಷ್ಣ ಬರುವುದಿಲ್ಲ. ಕಾದು ನೋಡು. ಅವನು ಬರುವಂತೆ ಮಾಡುವೆನು.
ಆದರೆ ಅವನಿಗೂ ಅದೇ ಉತ್ತರ ಲಭಿಸಿತು.
ಅರ್ಜುನ, ನಿನ್ನನ್ನು ನಿರಾಶೆಗೊಳಿಸುವುದು ನನಗೂ ಸಂಕಟವೇ. ನಾಳೆ ನನಗೆ ಬಿಡುವೇ ಇಲ್ಲದಷ್ಟು ಕೆಲಸ.
ಅರ್ಜುನ ಭಾರವಾದ ಹೃದಯದಿಂದ ಹಿಂದಿರುಗಿದನು.
ಹ್ಞುಂ! ಕೃಷ್ಣ ಹೀಗೆ ನಿರಾಶೆಗೊಳಿಸುವನೆಂದು ನಾನೆಂದೂ ಭಾವಿಸಿರಲಿಲ್ಲ.
ಮರುದಿನ ಭೀಮ ಎಂದಿನಂತೆ ತಡವಾಗಿ ಎದ್ದನು.
ನೀವೆಲ್ಲ ಏಕೆ ಹೀಗೆ ಮಂಕಾಗಿದ್ದೀರಿ?


ಯುಧಿಷ್ಠಿರ ಹೇಳಿದ.
ಔತಣಕ್ಕೆ ಕೃಷ್ಣನನ್ನು ಆಹ್ವಾನಿಸಿದೆವು. ಆದರೆ ಅವನು ನಮ್ಮ ಆಹ್ವಾನವನ್ನು ಮನ್ನಿಸಲಿಲ್ಲ.
12
ಭೀಮ ನಕ್ಕನು.
ಅಷ್ಟೇಯೆ! ಚಿಂತೆಯನ್ನು ಬಿಡಿ. ನಾನು ಹೋಗಿ ಕರೆತರುತ್ತೇನೆ.
ನಾನು ಕರೆದಾಗಲೂ ಅವನು ಒಪ್ಪಲಿಲ್ಲ. ನೀನು ಹೋದರೆ ಬರುವನೇ?
13
ಹಾ, ಹಾ ಹಾ.
ನೀನೋ!
ಭೀಮ ಅವರ ಟೀಕೆಗಳಿಗೆ ಗಮನ ಕೊಡಲಿಲ್ಲ.
ದ್ರೌಪದಿ, ನೀನು ಔತಣವನ್ನು ಸಿದ್ಧಪಡಿಸು. ನಾನು ಕೃಷ್ಣನೊಂದಿಗೆ ಬರುವೆನು.
14
ಎಲ್ಲರೂ ಜೋರಾಗಿ ನಕ್ಕರು.
ಒಳ್ಳೆಯ ತಮಾಷೆ !
ಭೀಮ ಹತಾಶನಾಗಿ ಹಿಂದಿರುಗುವನು.
15
ಹ, ಹ, ಹ !
ಅವನಿಗೆ ಭ್ರಮೆ.


ಭೀಮ ತನ್ನ ಗದೆಯನ್ನು ತಿರುಗಿಸಿ ಮೇಲಕ್ಕೆಸೆದು ಜೋರಾಗಿ ಕಿರುಚಿದನು.
ಕೃಷ್ಣ! ನನ್ನೊಡನೆ ಬರುವೆಯೋ ಇಲ್ಲವೋ? ಇಲ್ಲವೆಂದರೆ ಈ ಗದೆ ನನ್ನ ಮೇಲೆ ಬಿದ್ದು ನನ್ನ ತಲೆಯನ್ನು ಅಪ್ಪಳಿಸಲಿ
16
ತಕ್ಷಣವೇ ಕೃಷ್ಣ ಪ್ರತ್ಯಕ್ಷವಾದನು. ಭಗವಂತ ತನ್ನ ಭಕ್ತರ ಕರೆಗೆ ಓಗೊಡುವುದಿಲ್ಲವೇ?
17
ಭೀಮನ ತಲೆಯ ಮೇಲೆ ಬೀಳುತ್ತಿದ್ದ ಗದೆಯನ್ನು ಕೃಷ್ಣ ಮೃದುವಾಗಿ ಹಿಡಿದನು.
18
ಕೃಷ್ಣ ಭೀಮನನ್ನು ಆಲಂಗಿಸಿದನು.
19
ಬಾ ಕೃಷ್ಣ, ಬಾ!
ಅರ್ಜುನನಿಗೆ ಅವಮಾನವಾದಂತಾಯಿತು. ಅವನು ನಾಚಿಕೆಯಿಂದ ದೀನನಾದನು.
ಕೃಷ್ಣ ಭೀಮನ ಭಕ್ತಿಗೆ ಓಗೊಟ್ಟನು.ಭೀಮ ತನ್ನ ಭಕ್ತಿಯನ್ನು ಪ್ರದರ್ಶಿಸಲಿಲ್ಲ. ಆದರೆ ಕೃಷ್ಣನಿಗೆ ನಿಜವಾದ ಭಕ್ತಿ ತಿಳಿದಿತ್ತು. ಭಗವಂತ ಅಂತಹ ಭಕ್ತರನ್ನು ಯಾವಾಗಲೂ ಇಷ್ಟಪಡುವನು.
20

## ಜೀವನಪ್ರಭ



# ಧನುರ್ದಾಸ

ಪುಷ್ಪ ಶೇಷಾದ್ರಿ

[ಮೈಸೂರಿನ ನಿವಾಸಿಗಳಾದ ಲೇಖಕಿ ರಾಮಾನುಜಾಚಾರ್ಯರ ಶಿಷ್ಯನಾದ ಧನುರ್ದಾಸನ ಜೀವನವನ್ನು ಪರಿಚಯಿಸಿದ್ದಾರೆ.]

ವಿಶಿಷ್ಟಾದ್ವೈತದ ಆಚಾರ್ಯರಾದ ರಾಮಾನುಜಾಚಾರ್ಯರಿಗೆ ಅತ್ಯಂತ ಪ್ರಭಾವಶಾಲಿಗಳಾದ ಶಿಷ್ಯರುಗಳಿದ್ದರು. ಅವರಲ್ಲಿ ಧನುರ್ದಾಸನೂ ಒಬ್ಬನಾಗಿದ್ದನು. ಅವನಲ್ಲಿ ಆದ ಪರಿವರ್ತನೆ ಮತ್ತು ಶ್ರೀರಾಮಾನುಜರು ಅವನ ಮೇಲೆ ತೋರಿದ ಕರುಣೆಗಳು ಮನನಯೋಗ್ಯ.

ಶೂರನೂ, ಬಲಶಾಲಿಯೂ ಆದ ಧನುರ್ದಾಸನು ಜನಿಸಿದ್ದು ಮಲ್ಲರ ಪಂಗಡದಲ್ಲಿ. ಅದೇ ಊರಿನ ಕನಕಾಂಬಾ ಎಂಬ ಅತ್ಯಂತ ಸುಂದರ ಯುವತಿಯನ್ನು ಪ್ರೀತಿಸಿ ಧನುರ್ದಾಸ ಮದುವೆಯಾದ. ಅವಳು ಅತಿ ರೂಪವತಿಯಾದ್ದರಿಂದ ಅವಳ ಸೌಂದರ್ಯಕ್ಕೆ ಮಾರುಹೋಗಿದ್ದ. ಅವಳ ತಿದ್ದಿದ ಹುಬ್ಬುಗಳು, ಹೊಳೆಯುವ ಸುಂದರ ನಯನಗಳು ಮತ್ತು ಉದ್ದವಾದ ಕೇಶರಾಶಿ ಧನುರ್ದಾಸನನ್ನು ಮರುಳು ಮಾಡಿದ್ದವು.

ಪ್ರತಿ ಚೈತ್ರಮಾಸದಲ್ಲಿ, ಶ್ರೀರಂಗದಲ್ಲಿ ರಂಗನಾಥನಿಗೆ 'ಚೈತ್ರೋತ್ಸವ' ಬಹಳ ವಿಜೃಂಭಣೆಯಿಂದ ನೆರವೇರುವುದು. ಒಂದು ವರ್ಷ ಇದನ್ನು ವೀಕ್ಷಿಸಲು, ಧನುರ್ದಾಸ ದಂಪತಿಗಳು ಶ್ರೀರಂಗಕ್ಕೆ ಬಂದರು. ಉತ್ಸವವು ರಸ್ತೆಯಲ್ಲಿ ಬರುತ್ತಿರಲು, ಅದರ ಜೊತೆಗೇ ನಡೆದು ಬರುತ್ತಿದ್ದರು ಈ ದಂಪತಿಗಳು. ಕನಕಾಂಬೆಗೆ ಎಲ್ಲಿ ಬಿಸಿಲು ತಗಲುವುದೋ ಎಂದು ಬಹಳ ಶ್ರದ್ಧೆಯಿಂದ ಅವಳಿಗೆ ಸ್ವಲ್ಪವೂ ಆಯಾಸವಾಗದಂತೆ ಅವಳಿಗೆ ನೆರಳಾಗಿ ಪಕ್ಕದಲ್ಲಿದ್ದು, ಉತ್ಸವವನ್ನು ನೋಡುವುದರ ಬದಲು ಕನಕಾಂಬೆಯ ರೂಪ-ಲಾವಣ್ಯಗಳನ್ನೇ ವೀಕ್ಷಿಸುತ್ತ, ಉತ್ಸವದ ಬೀದಿಯಲ್ಲಿ ನಡೆದ ಧನುರ್ದಾಸ.

ಆ ಸಮಯಕ್ಕೆ ಶ್ರೀರಾಮಾನುಜರು ತಮ್ಮ ಶಿಷ್ಯವೃಂದದ ಜೊತೆಗೆ, ಉತ್ಸವವನ್ನು ವೀಕ್ಷಿಸಲು ಬಂದರು. ಆಗ ಇವರಿಗೆ, ಈ ವಿಚಿತ್ರ ದಂಪತಿಗಳು ಕಣ್ಣಿಗೆ ಬೀಳಲು, ಆಶ್ಚರ್ಯಚಕಿತರಾಗಿ, "ಇವನು ಆಕೆಯಲ್ಲಿ ಇಷ್ಟೊಂದು ಅನುರಕ್ತನಾಗಿರುವನಲ್ಲ? ವ್ಯರ್ಥವಾಗಿ ಜೀವನವನ್ನು ಹಾಳು ಮಾಡಿಕೊಳ್ಳುವನಲ್ಲ! ಇದೇ ಅವನ ದೃಷ್ಟಿಯನ್ನು ಶ್ರೀರಂಗನಾಥನಲ್ಲಿಟ್ಟರೆ ಜನ್ಮ ಸಾರ್ಥಕವಾಗುವುದಲ್ಲ" ಎಂದು ಮನದಲ್ಲೇ ಯೋಚಿಸಿದರು. ಇಷ್ಟು ಜನಜಂಗುಳಿಯಲ್ಲೂ ಸಹ ಸುತ್ತಮುತ್ತಲಿನ ಪರಿವೆಯೇ ಇಲ್ಲದೆ, ಆ ಹೆಣ್ಣಿನತ್ತ ಆಕರ್ಷಿತನಾಗಿರುವನಲ್ಲ! ಹೇಗಾದರೂ ಅವನ ಮನಸ್ಸನ್ನು ರಂಗನಾಥನೆಡೆಗೆ ತಿರುಗುವಂತೆ ಮಾಡಬೇಕೆಂದು ಶ್ರೀರಾಮಾನುಜರು ನಿರ್ಧರಿಸಿದರು.

ಉತ್ಸವವು ಮುಗಿದನಂತರ, ರಾಮಾನುಜರು ಕೆಲವು ಶಿಷ್ಯರನ್ನು ಕರೆದು ಆ ವ್ಯಕ್ತಿಯನ್ನು ತೋರಿಸಿ, ಅವನ ಕುಲ-ಹೆಸರು ಮತ್ತು ಎಲ್ಲಿ ತಂಗಿರುವನೆಂದು ತಿಳಿದು, ಆತನನ್ನು ತಮ್ಮಲ್ಲಿಗೆ ಕರೆದುತರುವಂತೆ ಆಜ್ಞಾಪಿಸಿದರು. ರಾಮಾನುಜರ ಕಣ್ಣಿಗೆ ಕಾಣಿಸಿಕೊಂಡ ಪ್ರಯುಕ್ತ ಧನುರ್ದಾಸನ ಜೀವನದಲ್ಲಿ ಒಂದು ದೊಡ್ಡ ಮಾರ್ಪಾಟಾಗುವ ಸಂದರ್ಭ ಒದಗಿ ಬಂದಂತಾಯಿತು.

ಧನುರ್ದಾಸನು ಪತ್ನಿಯ ಜೊತೆಯಲ್ಲಿ ಬಂದು ರಾಮಾನುಜರನ್ನು ಕಂಡು "ನನ್ನನ್ನು ಬರಮಾಡಿಕೊಂಡ ಕಾರಣವಾದರೂ ಏನು? ತಮ್ಮ ಪರಿಚಯವೇ ನನಗಿಲ್ಲವಲ್ಲ!" ಎಂದನು.

ರಾಮಾನುಜರು ಧನುರ್ದಾಸನನ್ನು ಹತ್ತಿರಕ್ಕೆ ಕರೆದು, ಅವನ ಹೆಸರು ಮುಂತಾದ ವಿವರಗಳನ್ನೆಲ್ಲ ಕೇಳಿ, "ಉತ್ಸವದ ಮಧ್ಯದಲ್ಲಿ ಜನ ತುಂಬಿದ ರಸ್ತೆಯಲ್ಲಿ ಎಲ್ಲರೂ ದೇವರನ್ನೇ ನೋಡುತ್ತಿರುವಾಗ ನೀನು ಮಾತ್ರ ಹೀಗೆ ನಿನ್ನ ಪತ್ನಿಯೆಡೆಗೆ ಅಪಾರ ಪ್ರೇಮವನ್ನು ಪ್ರದರ್ಶಿಸುವುದು, ನಿನ್ನಂತಹ ಶೂರನಿಗೆ ಸರಿಯಲ್ಲ" ಎಂದರು.

ಅದಕ್ಕೆ ಧನುರ್ದಾಸ, "ಅವಳ ಆ ಸುಂದರ ನಯನಗಳನ್ನು ನೋಡುತ್ತಿದ್ದರೆ, ಪ್ರಪಂಚವನ್ನೇ, ನನ್ನ ಇರುವಿಕೆಯನ್ನೇ ಮರೆತುಬಿಡುವೆ. ಅವಳ ರೂಪಿಗೆ ನಾನು ದಾಸನಾಗಿರುವೆ. ಅವಳಿಲ್ಲದೆ ನಾನು ಬದುಕಲಾರೆ. ಅವಳ ಕಣ್ಣುಗಳ ಕಾಂತಿಯನ್ನು ಮರೆಯಲಾರೆ" ಎಂದನು.

ರಾಮಾನುಜರು, "ಧನುರ್ದಾಸ, ಕನಕಾಂಬೆಯ ಕಣ್ಣುಗಳಿಗಿಂತ, ಇನ್ನೂ ಸಾವಿರ ಪಾಲು ಅಧಿಕ ಕಾಂತಿಯುಳ್ಳ ಕಣ್ಣುಗಳನ್ನು ನಾನು ನಿನಗೆ ತೋರಿಸಿದರೆ?" ಎಂದರು. "ಇಲ್ಲ, ಅದು ಖಂಡಿತ ಸಾಧ್ಯವಿಲ್ಲ, ಸ್ವಾಮಿ. ಒಂದು ಪಕ್ಷ ನೀವು ಹೇಳುವುದು ನಿಜವಾದರೆ, ನಾನು ನಿಮ್ಮ ಮಾತುಗಳನ್ನು ನಿಜವಾಗಿಯೂ ಸ್ವೀಕರಿಸುವೆ. ಆಗ ನನ್ನ ಜನ್ಮ ಸಾರ್ಥಕವೆಂದು ಭಾವಿಸುವೆ" ಎಂದ ಧನುರ್ದಾಸ.

ನಂತರ ಯತಿವರ್ಯರು, ಧನುರ್ದಾಸನ ಕೈಹಿಡಿದು ಕರೆದುಕೊಂಡು ಹೋಗಿ, ಶ್ರೀರಂಗನಾಥನ ಮುಂದೆ ನಿಲ್ಲಿಸಿ, 'ನೋಡು, ಒಮ್ಮನಸ್ಸಿನಿಂದ, ರಂಗನಾಥನ ಕಣ್ಣುಗಳಲ್ಲಿ ಕಣ್ಣಿಟ್ಟು,